ಬಿಡಬಹುದೆಂಬ ಭಯ ಅವನಿಗಾಯ್ತು. ಮಾಡಾಕಾಗದಿದ್ರೆ ಸುಮ್ಮನಾದ್ರು ಇರಾಕಾಗಲ್ವ ಎಂಬಂಥ ಬಿರುನೋಟ. ಆತ ಬಾಲ ಮುದುರಿಕೊಂಡು ಮುಂದಿನ ಕೋಣೆಗೆ ನಡೆದ.

ಅಡಿಗೆ ಮನೆಯಿಂದ, ಕುಟ್ಟುವುದು, ಅರೆಯುವುದು, ತುರಿಯುವುದು ಎಲ್ಲ ನಡೆಯುತ್ತಿದೆ. ಕಾಫಿಯಾದರೂ ಸಿಕ್ಕಿದರೆ ಇನ್ನು ಅರ್ಧಗಂಟೆ ಜೀವ ಹಿಡಿದಿರಬಲ್ಲೆ ಎಂದುಕೊಂಡ. ಅದು ಆಕೆಗೆ ಕೇಳಿಸಿದಂತೆ, ಬಿಸಿ ಬಿಸಿ ಕಾಫಿ ತಂದು ಮೇಜಿನ ಮೇಲಿರಿಸಿದಳು. ಒಂದು ಸಿಪ್ ಹೀರಿದ. ಚೆನ್ನಾಗಿದೆ ಎಂದ. ಆಕೆ ಆಗಲೇ ಅಡಿಗೆ ಮನೆಯಲ್ಲಿದ್ದಳು. ಈ ಕಾಫಿ, ತಿಂಡಿ, ಊಟ, ಈ ರಾತ್ರಿಯ ಬೆಳಕು, ಎಲ್ಲ ವಿಶಿಷ್ಟವಾಗಿವೆ, ಹೊಸ ಅರ್ಥದಿಂದ ಹೊಳೆಯುತ್ತಿವೆ ಅನ್ನಿಸಿತು.

ಈ ಸಂಸಾರಕ್ಕೆ ಒಂದು ಹೊಸ ವಾಸನೆ ಇದೆ ಎಂಬಂತೆ ಅಡಿಗೆ ಮನೆಯಿಂದ ಹೊರಡುವ ಸದ್ದುಗಳ ಜತೆಗೇ ಆಗಿನಿಂದ ಸುಳಿಯ ತೊಡಗಿದ್ದ ಸಾಂಬಾರಿನ ಪರಿಮಳ ಮಲಗಿದಂತಿದ್ದ ಅವನ ಹಸಿವನ್ನ ತಟ್ಟಿ ಎಬ್ಬಿಸಿತು. ಕೂಡಲೇ ಅಡಿಗೆ ಮನೆಗೆ ನುಗ್ಗಿ ಬಿಡಲೆ? ಎಂದು ಆತುರ ಉಂಟಾಯಿತು. ಆದರೆ ಆಕೆ ಏನಾದರೂ ಅನ್ನಬಹುದೆಂದು ಕೊಂಚ ಗಾಬರಿಯಾಯ್ತು.

ಆಕೆಯ ಹೆಸರೇನು? ಆಕೆ ತನ್ನನ್ನೇನೂ ಕೇಳಲಿಲ್ಲ. ಇದ್ದೂ ಇಲ್ಲ ಎಂಬಂತೆ ನಿರ್ಲಕ್ಷವಾಗಿ ನಡೆದು ಕೊಂಡಿದ್ದಾಳೆ. ನಿನ್ನ ಹೆಸರೇನು? ಎಂದು ಎರಡು ಮೂರು ಬಾರಿ ಕೇಳಬೇಕು ಎಂದುಕೊಂಡು ಸುಮ್ಮನಾಗಿದ್ದ.

ಆಕೆ ದಪ್ಪದ ಮುಚ್ಚಳ ತೆಗೆದು, ಹಾಕಿ ಒಗ್ಗರಣೆ ಚೊಂಯ್ ಎನ್ನಿಸಿ, ಎಲ್ಲವುಗಳೊಂದಿಗೆ ಆಟವಾಡುತ್ತಿದ್ದಾಳೆ ಎನ್ನಿಸಿತ್ತು.

ನೋಡುತ್ತಿದ್ದ; ಆಕೆಯ ಹೆಸರು ತಿಳಿಯಲಿಲ್ಲ. ನೂರಾರು ಹೆಸರುಗಳು ಬಂದವು. ಪಮ್ಮಿ, ಶಮ್ಮಿ, ಶಕ್ಕು, ಲತಾ, ಮಧುರ, ಶುಭಾಂಗಿ, ಶುಕಭಾಷಿಣಿ, ಕನಕ, ಕಮಲ, ಕೋಮಲ ಎಲ್ಲ ತನ್ನ ಪ್ರೈಮರಿ ಶಾಲೆಯಿಂದ ಕಾಲೇಜಿನ ಕಡೇ ದಿನಗಳವರೆಗೆ ಕಲಿತವರು ಓಡೋಡುತ್ತ ಬಂದರು... ತಲೆಯಿಂದ ಚಕ್ ಎಂದು ಬಾಣದ ಹಾಗೆ ಸೆಟೆದು ನಿಂತ ಶಕ್ಕುವಿನ ಜಡೆ. ಉದ್ದನೆಯ ಕರಿ ನಾಗರದಂತಿದ್ದ ಶುಭಾಂಗಿಯ ಜಡೆ, ಆ ಜಡೆಯೇನಾದರೂ ನನಗೆ ಸಿಕ್ಕರೆ ಅದರಲ್ಲೆ ನೇಣು ಹಾಕಿಕೊಂಡು ಸಾಯುತ್ತಿದ್ದೆ... ಎಂದು ಎಷ್ಟೋ ಸಲ ಅನ್ನಿಸಿತ್ತು. ಅಂಥ ಜಡೆಗಳ ಜತೆಗೇ, ಅವರ ಚೂಡಿದಾರ್, ಸೀರೆ, ಮಿಡಿ, ಎಲ್ಲ ಸರ ಸರ ರೀಲ್‌ನಂತೆ ಸರಿಯ ತೊಡಗಿದವು.

ಹಸಿವಿನ ಚುರುಕು, ಕಾದ ಹೆಂಚಿನಮೇಲೆ ಕೂತಂತಿದ್ದ. ಅಡಿಗೆ ಮನೆಯಿಂದೇನಾದರು ಕರೆ ಬರಬಹುದೇ ಎಂದು ಓತಿಕ್ಯಾತದ ತರ ಕತ್ತು ತಿರುಗಿಸಿ ನೋಡಿದ. ಈ ಹಸಿವು ತನ್ನನ್ನು ನಿಶ್ಚೇತನಗೊಳಿಸಿ ಬಿಡುತ್ತದೆ. ಕಣ್ಣಿಗೆ ಕತ್ತಲೆ ಬರುತ್ತಿದೆ. ದೇಹದ ಮೇಲೆ ಹಸಿವು ಥಕ ಥಕ ಕುಣಿಯುತ್ತಿದೆ. ಇನ್ನು ತಡೆಯಲಾರೆ ಎಂದು ತನ್ನ ಗುರಿಯಾದ ಅಡಿಗೆ ಮನೆಯ ಕಡೆಗೆ ಆರ್ದ್ರವಾಗಿ ನೋಡಿದ.

ತಟ್ಟೆ, ಲೋಟ ಇಟ್ಟು, ಲೋಟಕ್ಕೆ ನೀರು ಹೊಯ್ದ ಸದ್ದು ಕೇಳಿದ್ದೆ ತುಂಬಾ ಖುಷಿಯಾಗಿ, ಆರಿದ ನಾಲಿಗೆಯ ಮೇಲೂ ತೇವ ಆಡಿತು. ಕ್ಷಣಮಾತ್ರದಲ್ಲಿ ಪ್ರಕಾಶ್ ಚಾಪೆಯ ಮೇಲೆ ಕೂತಿದ್ದ. ಬಿಸಿ ಬಿಸಿ ಅನ್ನ, ಬಿಸಿ ಸಾರು. ಎಂಥ ಅಪ್ಯಾಯಮಾನವಾದ ಪರಿಮಳ. ಈ ವರೆಗೆ ಬದುಕಿದ್ದು ಸಾರ್ಥಕ. ಅನ್ನದೇವರ ಮುಂದೆ ಇನ್ನು ದೇವರು ಉಂಟೆ? ಎನ್ನಿಸಿ ನಿಜಕ್ಕೂ ಧನ್ಯತೆಯ ಭಾವ ಉಂಟಾಯ್ತು. ತಿನ್ನುತ್ತಾ ಹೋದಂತೆ – ಸರ್ವ ಇಂದ್ರಿಯಗಳು ಆ ರುಚಿಯನ್ನ ಮುಟ್ಟಿದವು, ಮೂಸಿದವು, ನೆಕ್ಕಿದವು. ದೊಡ್ಡದಾಗಿ ತೇಗು ಸಹ ಬಂದಿತು. ಆಕೆ ಆ ತೇಗನ್ನ ಸಹಿಸಿದಂತೆ ತೋರಿತು.

ಯಾರ ಮನೆಯೋ? ಈಕೆ ಯಾವ ಹೆಣ್ಣೋ? ಮನೆಯ ಬಾಗಿಲನ್ನ ನನ್ನ ಕೈನಿಂದ ತೆಗೆದು ನುಗ್ಗಿದೆ. ಮುಂದೆ ಆಟಕ್ಕೆ ಒಂದು ಹೊಸ ತಿರುವೇ ಬಂದಿತು. ಈಗ ಯಾರಾದರೂ ಬಂದಾರೆಂಬ ಹೆದರಿಕೆ – ಹಸಿವು ಮಾಯವಾಗಿದೆ.